# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

## ವಿಶೇಷ ರಾಜ್ಯ ಪತ್ರಿಕೆ

| ಭಾಗ – ೩<br>**Part – III** | ಬೆಂಗಳೂರು, **ಗುರುವಾರ ೨೦,** ನವೆಂಬರ್, ೨೦೨೫ (**ಕಾರ್ತಿಕಾ , ೨೯,** ಶಕವರ್ಷ, ೧೯೪೭)<br>**BENGALURU, THURSDAY 20, NOVEMBER, 2025 ( KARTHIKA , 29, SHAKAVARSHA, 1947)** | ನಂ. ೭೪೨<br>**No. 742** |
|---|---|---|


**<u>ಕರ್ನಾಟಕ ಸರ್ಕಾರ</u>**

**ಕಡತ ಸಂಖ್ಯೆ:ನಅಇ 131 ಎಂಎಲ್‌ಆರ್ 2025(e)**

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, **ದಿನಾಂಕ:20/11/2025.**

**<u>ಅಧಿಸೂಚನೆ</u>**

ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರ ಸೆಕ್ಷನ್–3 ರೊಂದಿಗೆ ಓದಿಕೊಂಡಂತೆ ಸೆಕ್ಷನ್–4, 9, 349, 355, 357, 359, 360 ಮತ್ತು 361 ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಘನತೆವೆತ್ತ ಕರ್ನಾಟಕ ರಾಜ್ಯಪಾಲರು ಈ ಕೆಳಗಿನವುಗಳನ್ನು ಗಮನಿಸಿ ಅಂದರೆ:

1. ಅಂಥ ಪ್ರದೇಶದ ಜನಸಂಖ್ಯೆ ಐವತ್ತು ಸಾವಿರಕ್ಕಿಂತ ಕಡಿಮೆಯಿಲ್ಲದ ಹೊರತು;
2. ಅಂಥ ಪ್ರದೇಶದಲ್ಲಿನ ಜನಸಂಖ್ಯೆಯ ಸಾಂದ್ರತೆಯು ಒಂದು ಚದರ ಕಿಲೋ ಮೀಟರ್ ಪ್ರದೇಶಕ್ಕೆ ಒಂದು ಸಾವಿರದ ಐದು ನೂರು ನಿವಾಸಿಗಳಿಗಿಂತ ಕಡಿಮೆಯಿಲ್ಲದ ಹೊರತು;
3. ಹಿಂದಿನ ನಿಕಟಪೂರ್ವ ಜನಗಣತಿಯಲ್ಲಿ ಅಂಥ ಪ್ರದೇಶದಿಂದ ಸ್ಥಳೀಯ ಆಡಳಿತಕ್ಕಾಗಿ ತೆರಿಗೆ ಮತ್ತು ತೆರಿಗೆಯಿಲ್ಲದ ಇತರ ಸಂಪನ್ಮೂಲಗಳಿಂದ ಉತ್ಪಾದಿತವಾದ ರಾಜಸ್ವ ವಾರ್ಷಿಕ ಒಂಭತ್ತು ಲಕ್ಷ ರೂಪಾಯಿಗಳು ಅಥವಾ ವಾರ್ಷಿಕ ತಲಾ ಒಬ್ಬನಿಗೆ ನಲವತ್ತೈದು ರೂಪಾಯಿಗಳ ದರದಂತೆ ಲೆಕ್ಕ ಹಾಕಲಾದ ಮೊತ್ತ ಇವೆರಡರಲ್ಲಿ ಯಾವುದು ಹೆಚ್ಚೋ ಆ ಮೊತ್ತಕ್ಕಿಂತ ಕಡಿಮೆಯಿರದ ಹೊರತು:
4. ಅಂಥ ಪ್ರದೇಶದಲ್ಲಿ ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗದ ಶೇಕಡಾವಾರು ಒಟ್ಟು ಉದ್ಯೋಗದ ಶೇಕಡ ಐವತ್ತಕ್ಕಿಂತ ಕಡಿಮೆಯಿಲ್ಲದ ಹೊರತು;

ಶೆಡ್ಯೂಲ್–ಬಿ ಯಲ್ಲಿ ನಿರ್ದಿಷ್ಟಪಡಿಸಲಾದ ಪರಿಮಿತಿಯುಳ್ಳ ಶೆಡ್ಯೂಲ್–ಎ ರಲ್ಲಿನ ಕಲಬುರಗಿ ಜಿಲ್ಲೆಯ ಹಾಲಿ ಸೇಡಂ ಪುರಸಭೆಯೊಂದಿಗೆ ಬಟಗೇರ.ಬಿ ಗ್ರಾಮ ಪಂಚಾಯಿತಿಯ ಬಟಗೇರ.ಬಿ & ಬಟಗೇರ.ಕೆ ಗ್ರಾಮಗಳನ್ನು ಸೇರ್ಪಡೆಗೊಳಿಸಿ ಈ ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಆಡಳಿತಾತ್ಮಕ ದೃಷ್ಟಿಯಿಂದ "ಸಣ್ಣ ನಗರ ಪ್ರದೇಶ" ಎಂದು ಉದ್ಘೋಷಿಸಿ, ಸದರಿ ಸಣ್ಣ ನಗರ ಪ್ರದೇಶವನ್ನು "ಸೇಡಂ ನಗರಸಭೆ" ಎಂದು ಪದನಾಮೀಕರಿಸಲು ಹಾಗೂ ಸದರಿ ಸಣ್ಣ ನಗರ ಪ್ರದೇಶಕ್ಕೆ ನಗರಸಭೆಯನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ.

ಈ ಅಧಿಸೂಚನೆಯನ್ನು ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿದೆ. ಈ ಬಗ್ಗೆ ಯಾವುದೇ ಆಕ್ಷೇಪಣೆ/ಸಲಹೆಗಳನ್ನು ಸಲ್ಲಿಸಲು ಇಚ್ಛಿಸುವ ಎಲ್ಲಾ ವ್ಯಕ್ತಿಗಳು ಅದನ್ನು ಲಿಖಿತದಲ್ಲಿ ಕಾರಣಸಹಿತವಾಗಿ ಸದರಿ ಅಧಿಸೂಚನೆಯನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ,

9ನೇ ಮಹಡಿ, ವಿ.ವಿ.ಗೋಪುರ, ಬೆಂಗಳೂರು ಇವರಿಗೆ ಸಲ್ಲಿಸಬೇಕೆಂದು ಹಾಗೂ ಅಧಿಸೂಚನೆಯನ್ನು ಸದರಿ ಅವಧಿಯ ತರುವಾಯ ನಿಗದಿತ ಸಮಯದಲ್ಲಿ ಪರಿಶೀಲನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಟಿ ಮಂಜುನಾಥ)**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ

**ಕಡತ ಸಂಖ್ಯೆ:ನಅಇ 131 ಎಂಎಲ್ಆರ್ 2025(e).**

**ಶೆಡ್ಯೂಲ್–ಎ**

| ಜಿಲ್ಲೆ | ಪರಿಗಣಿಸಲಾಗುವ ಸ್ಥಳೀಯ ಸಂಸ್ಥೆ ಹೆಸರು | ಸೇರ್ಪಡೆಗೊಳಿಸಲು ಉದ್ದೇಶಿಸಿರುವ ಪ್ರದೇಶಗಳ ವಿವರ | ಒಟ್ಟು ಪ್ರದೇಶ |
|---|---|---|---|
| ಕಲಬುರಗಿ | ಸೇಡಂ ಪುರಸಭೆ | 1) ಹಾಲಿ ಸೇಡಂ ಪುರಸಭೆ ವ್ಯಾಪ್ತಿಯ ಪ್ರದೇಶಗಳು<br>2) ಬಟಗೇರ.ಬಿ ಗ್ರಾಮ ಪಂಚಾಯಿತಿಯ ಬಟಗೇರ.ಬಿ ಮತ್ತು ಬಟಗೇರ.ಕೆ ಗ್ರಾಮಗಳು | 31.00 ಚದರ ಕಿಲೋ ಮೀಟರ್ |

**ಷೆಡ್ಯೂಲ್–ಬಿ**

**ಪೂರ್ವ:** ಕುಟುಕುಂಟಾ, ಮದಕಲ್ ಗ್ರಾಮಗಳು.

**ಪಶ್ಚಿಮ:** ಕೊಂಕನಳ್ಳಿ, ಹೊಸಹಳ್ಳಿ, ಉಡಗಿ ಗ್ರಾಮಗಳು.

**ಉತ್ತರ:** ತರನಹಳ್ಳಿ, ಬಿಬ್ಬಳ್ಳಿ, ಸೆಟಪಟ್ಟನಹಳ್ಳಿ ಗ್ರಾಮಗಳು.

**ದಕ್ಷಿಣ:** ಇಂಜೇನಹಳ್ಳಿ, ಜವಾಹರನಗರ ಗ್ರಾಮಗಳು.

# GOVERNMENT OF KARNATAKA

**No.UDD 131 MLR 2025(e).**

Karanataka Government Secretariat,
Vikasa Soudha,
Bengaluru, **dated:20/11/2025.**

## NOTIFICATION

In exercise of the powers conferred by Section-3 read with section-9, 349, 355, 357, 359, 360 and 361 of the Karnataka Municipalities Act 1964, His Excellency, the Governor of Karnataka hereby proposes the present Town Municipal Area of Sedam including Batagera.B and Batagera.K villages of Batagera.B Grama Panchayat of Kalaburagi District to be notified as the "Smaller Urban Area" as mentioned in Schedule "A" along with the boundaries mentioned in Schedule "B" and further to declare as the "City Municipal Council of Sedam" and constitute the City Municipal Council to the said smaller urban area with effect from the date of publishing this Notification in the Official Gazette for the purpose of administration and development having regard to:

i. The population of such area is not less than fifty thousand;
ii. The density of population in such area is not less than one thousand five hundred inhabitants to one square kilo meter of area;
iii. The revenue generated for local administration from such area from tax and non-tax sources in the year of the last preceding census is not less than rupees nine lakhs per annum or a sum calculated at the rate of rupees forty-five per capita per annum, whichever is higher;
iv. The percentage of employment in non-agricultural activities is not less than fifty per cent of the total employment.

The notification is hereby published for the information of the Public. All the persons, who would like to file any objection/suggestion to this Notification are hereby required to submit the same with reasons in writing to the Director, Directorate of Municipal Administration, 9th Floor, V.V.Tower, Bengaluru within 30 days from publication of this Notification in the Official Gazette. Further, Notification will be taken up for final consideration after the mentioned period of 30 days.

By Order and in the name of the
Governor of Karnataka,

**(T Manjunath)**
Under Secretary to Government,
Urban Development Department

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



**No.UDD 131 MLR 2025(e)**

## Schedule-A

| District | Name of the ULB being considered | Areas to be included | Total Area |
|---|---|---|---|
| Kalaburagi | Sedam Town Municipal Council | 1) Areas of present Town Municipal Council of Sedam;<br>2) Batagera.B & Batagera.K villages of Batagera.B Gram Panchayat. | 31.00 Square Kilo Meters |

## Schedule-B

**East:** Kurkunta, Madhakal villages.
**West:** Konkanahalli, Hosahalli, Udagi villages.
**North:** Tarnahalli, Bibballi, Setpatnahalli villages.
**South:** Injelli, Jawaharnagar villages.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH